# ಪ್ರಕೃತಿ



❁ ಆಕೆ ಎಲ್ಲವನ್ನೂ ನನಗೆ ತೋರಿಸಿಕೊಟ್ಟು ಬಿಟ್ಟಿದ್ದಾಳೆ. ಓ, ಆಕೆ ನನಗೆ ಎಷ್ಟೊಂದು ಅನುಭವಗಳನ್ನು ಮಾಡಿಕೊಟ್ಟಿದ್ದಾಳೆ! ಒಂದು ದಿನ ತೋರಿಸಿದಳು, ಎಲ್ಲೆಲ್ಲೂ ಶಿವ ಶಕ್ತಿಯರಿರುವುದನ್ನು. ಎಲ್ಲೆಲ್ಲೂ ಶಿವಶಕ್ತಿಯರ ಕ್ರೀಡೆಯೇ ನಡೆಯುತ್ತಿರುವುದನ್ನು ನೋಡಿದೆ. ಮನುಷ್ಯರಲ್ಲಿ, ಪ್ರಾಣಿಗಳಲ್ಲಿ, ತರುಗಳಲ್ಲಿ, ಲತೆಗಳಲ್ಲಿ ಎಲ್ಲದರಲ್ಲೂ ಶಿವಶಕ್ತಿಯಿರುವುದನ್ನು ನೋಡಿದೆ. ಪ್ರತಿಯೊಂದರಲ್ಲೂ ಪುರುಷ ಪ್ರಕೃತಿಯರ ಕ್ರೀಡೆಯನ್ನು ನೋಡಿದೆ.

❁ ಭಗವಂತ ಈ ಮೂರು ಕೆಲಸ ಮಾಡುತ್ತಿದ್ದಾನೆ: ಸೃಷ್ಟಿ, ಸ್ಥಿತಿ, ಪ್ರಳಯ. ಮೃತ್ಯು ತಪ್ಪಿದ್ದಲ್ಲ. ಪ್ರಳಯವಾದಾಗ ಎಲ್ಲಾ ಧ್ವಂಸವಾಗಿ ಹೋಗುತ್ತವೆ. ಯಾವುದೂ ಉಳಿಯುವುದಿಲ್ಲ. ಭಗವತಿ ಆಗ ಸೃಷ್ಟಿಗೆ ಬೇಕಾಗುವ ಬೀಜಗಳನ್ನು ಮಾತ್ರ ಶೇಖರಿಸಿ ಇಟ್ಟುಕೊಳ್ಳುತ್ತಾಳೆ. ಆಕೆ ಹೊಸದಾಗಿ ಸೃಷ್ಟಿ ಆರಂಭಿಸುವಾಗ ಅವುಗಳನ್ನೆಲ್ಲಾ ಹೊರಕ್ಕೆ ತೆಗೆಯುತ್ತಾಳೆ. ಗೃಹಿಣಿಯರು ಸೌತೆಕಾಯಿ ಬೀಜ, ಸಮುದ್ರದ ನೊರೆ, ನೀಲಿ ಗುಳಿಗೆ ಇನ್ನೂ ಏನೇನೋ ಚಿಕ್ಕಚಿಕ್ಕ ಪೊಟ್ಟಣಗಳನ್ನು ಒಂದು ಗುಡಾಣದಲ್ಲಿ ತುಂಬಿಟ್ಟುಕೊಂಡು ಬೇಕಾದಾಗ ಹೊರಕ್ಕೆ ತೆಗೆಯುವುದಿಲ್ಲವೇ ಹಾಗೆ.

❁ ಭಗವಂತನ ಕೃಪೆ ದೊರಕಿಸಿಕೊಳ್ಳಬೇಕಾದರೆ ಆದ್ಯಾಶಕ್ತಿ ರೂಪಿಣಿಯನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಬೇಕು. ಭಗವಂತನೇ ಒಂದು ರೂಪದಲ್ಲಿ ಮಹಾಮಾಯೆಯಾಗಿದ್ದಾನೆ. ಆಕೆ ಈ ಜಗತ್ತನ್ನು ಮುಗ್ಧಮಾಡಿ ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಿದ್ದಾಳೆ. ಆಕೆ ನಮ್ಮ ಕಣ್ಣಿಗೆ ಅಜ್ಞಾನವೆಂಬ ಮುಸುಕು ಹಾಕಿದ್ದಾಳೆ. ಆ ಮಹಾಮಾಯೆ ಬಾಗಿಲು ಬಿಟ್ಟುಕೊಟ್ಟರೆ ಮಾತ್ರ ಒಳಕ್ಕೆ ಪ್ರವೇಶ. ಹೊರಗಡೆಯೇ ಇದ್ದರೆ ಹೊರಗಿನ ವಸ್ತುಗಳನ್ನು ಮಾತ್ರ ನೋಡಬಹುದೇ ಹೊರತು, ಒಳಗಿರುವ ಆ ಸಚ್ಚಿದಾನಂದ ಪುರುಷನನ್ನು ನೋಡಲಾಗುವುದಿಲ್ಲ.

❁ ಆದ್ಯಾಶಕ್ತಿ ಲೀಲಾಮಯಿ; ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಾಳೆ. ಆಕೆಗೆ ಕಾಳೀ ಅಂತ ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ. ವಸ್ತು ಒಂದೇ. ನಿಷ್ಕ್ರಿಯವಾಗಿರುವಾಗ, ಸೃಷ್ಟಿ ಸ್ಥಿತಿ ಪ್ರಳಯ ಮಾಡದಿರುವಾಗ ಅದೇ ವಸ್ತುವಿಗೆ ಬ್ರಹ್ಮ ಅಂತ ಹೆಸರು. ಆದರೆ ಆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿರುವಾಗ ಅದೇ ವಸ್ತುವಿಗೆ 'ಕಾಳಿ' ಅಂತ ಹೆಸರು. ಶಕ್ತಿ ಅಂತ ಹೆಸರು. ವಸ್ತುವೇನೋ ಒಂದೇ; ಹೆಸರು ರೂಪ ಮಾತ್ರ ಬೇರೆ ಬೇರೆ.

❁ ಬ್ರಹ್ಮ ಶಕ್ತಿ ಅಭೇದ. ಶಕ್ತಿಯನ್ನು ಒಪ್ಪದೆ ಇದ್ದರೆ ಈ ಜಗತ್ತು ಮಿಥ್ಯೆಯಾಗಿ ಬಿಡುತ್ತದೆ. ನಾನು, ನೀನು, ಮಠ, ಹೆಂಡತಿ, ಮಕ್ಕಳು ಎಲ್ಲಾ ಮಿಥ್ಯೆಯಾಗಿ ಬಿಡುತ್ತವೆ. ಆದ್ಯಾಶಕ್ತಿ ಆಧಾರವಾಗಿರುವುದರಿಂದ ಈ ಜಗತ್ತು ನಿಂತುಕೊಂಡಿದೆ. ಆಸರೆ ಕೋಲು ಇಲ್ಲದೆ ಇತ್ತು ಎಂದರೆ, ಆಧಾರಕಟ್ಟು ಆಗುವ ಹಾಗಿಲ್ಲ. ಆಧಾರಕಟ್ಟು ಇಲ್ಲದೆ ಇತ್ತು ಎಂದರೆ ಸುಂದರ ದುರ್ಗಾಪ್ರತಿಮೆ ಆಗುವ ಹಾಗೆಯೇ ಇಲ್ಲ.

❁ ಯೋಗಮಾಯೆ ಎಂದರೆ ಪ್ರಕೃತಿ–ಪುರುಷರ ಸಂಯೋಗ. ಈ ಜಗತ್ತಿನಲ್ಲಿ ಏನೇನು ಕಣ್ಣಿಗೆ ಬೀಳುವುವೋ ಅವೆಲ್ಲವೂ ಈ ಸಂಯೋಗದಿಂದ ಉದ್ಭವವಾದುವು. ಉದಾಹರಣೆಗೆ ಶಿವ, ಕಾಳಿಯರ ಮೂರ್ತಿ ತೆಗೆದುಕೊ. ಕಾಳಿ ಶಿವನ ಮೇಲೆ ನಿಂತುಕೊಂಡಿದ್ದಾಳೆ. ಶಿವ ಶವದ ಹಾಗೆ ಆಕೆಯ ಪಾದದ ಕೆಳಗೆ ಬಿದ್ದುಕೊಂಡಿದ್ದಾನೆ. ಕಾಳಿ ಆತನ ಕಡೆಗೆ ದೃಷ್ಟಿಸಿ ನೋಡುತ್ತಿದ್ದಾಳೆ. ಇವೆಲ್ಲವೂ ಪುರುಷ ಪ್ರಕೃತಿಯರ ಸಂಯೋಗವನ್ನು ಸೂಚಿಸುತ್ತದೆ. ಪುರುಷ ನಿಷ್ಕ್ರಿಯ; ಅದಕ್ಕಾಗಿಯೇ ಶಿವ ಶವದ ಹಾಗೆ ನೆಲದ ಮೇಲೆ ಬಿದ್ದಿದ್ದಾನೆ. ಪುರುಷನ ಸಂಯೋಗದಿಂದ ಪ್ರಕೃತಿ ತನ್ನ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡುತ್ತಾಳೆ, ಸೃಷ್ಟಿ–ಸ್ಥಿತಿ–ಪ್ರಳಯ ಕಾರ್ಯಗಳನ್ನು ಮಾಡುತ್ತಾಳೆ. ರಾಧಾಕೃಷ್ಣರ ಯುಗಳ ಮೂರ್ತಿಗಳ ಸಂಕೇತವೂ ಇದೇನೆ. ಈ ಸಂಯೋಗಕ್ಕಾಗಿಯೇ ಆ ಪ್ರತಿಮೆಗಳು ಒಂದರ ಕಡೆ ಇನ್ನೊಂದು ಬಾಗಿರುವುದು.

❁ ಯಾರು ಬ್ರಹ್ಮನೋ, ಆತನೇ ಶಕ್ತಿ. ಆತನನ್ನೇ ನಾನು 'ಭಗವತಿ' ಎಂಬುದಾಗಿ ಕರೆಯುತ್ತಿರುವುದು. ಯಾವಾಗ ಆತ ನಿಷ್ಕ್ರಿಯನೋ, ಆಗ ಆತನನ್ನು 'ಬ್ರಹ್ಮ' ಅಂತ ಕರೆಯುತ್ತೇನೆ. ಸೃಷ್ಟಿ– ಸ್ಥಿತಿ–ಪ್ರಳಯ ಕಾರ್ಯ ಮಾಡುವಾಗ ಆತನನ್ನೇ 'ಶಕ್ತಿ' ಅಂತ ಕರೆಯುತ್ತೇನೆ. ನೀರು ಕೆಲವು ವೇಳೆ ಸ್ಥಿರವಾಗಿ; ಇನ್ನೂ ಕೆಲವು ವೇಳೆ ಅಲೆಗಳಿಂದ ಕೂಡಿ ಇರುವುದಿಲ್ಲವೇ ಅದೂ ಹಾಗೆ. ಶಕ್ತಿಯ ಲೀಲೆಯಿಂದಲೇ ಅವತಾರದ ಉತ್ಪನ್ನ, ಅವತಾರಪುರುಷ ಪ್ರೇಮ, ಭಕ್ತಿಯನ್ನು ಕಲಿಸಿಕೊಡಲು ಬರುತ್ತಾನೆ. ಆತನನ್ನು ಹಸುವಿನ ಕೆಚ್ಚಲಿಗೆ ಹೋಲಿಸಬಹುದು. ಹಾಲು ಬೇಕಾಗಿದ್ದರೆ, ಇದು ಕೆಚ್ಚಲಿನ ಮೂಲಕವೇ ಬರಬೇಕು. ಭಗವಂತನು ಮನುಷ್ಯನಾಗಿ ಅವತೀರ್ಣನಾಗುತ್ತಾನೆ. ಸರೋವರದ ಗುಂಡಿಗಳಲ್ಲಿ ಅನೇಕ ಮೀನುಗಳು ಬಂದು ಸೇರಿಕೊಳ್ಳುವ ಹಾಗೆ, ಅವತಾರ ಪುರುಷನಲ್ಲಿ ಭಗವಂತನ ಶಕ್ತಿ ವಿಶೇಷವಾಗಿ ತುಂಬಿಕೊಂಡಿರುತ್ತದೆ.

❁ ಯಾರು ಸಾಕಾರನೋ ಆತನೇ ನಿರಾಕಾರ. ಯಾರು ಸಗುಣನೋ ಆತನೇ ನಿರ್ಗುಣ. ಬ್ರಹ್ಮನೇ ಶಕ್ತಿ; ಶಕ್ತಿಯೇ ಬ್ರಹ್ಮ. ಇಬ್ಬರಿಗೂ ಭೇದವಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ